

ಬೇಲದ ಮರ



ಹಣ್ಣಿನ ಹೊರ ಕವಚ ಬಿರಿದಾಗ..

(6ನೇ ಪುಟದಿಂದ)

ಡಿಸೆಂಬರ್‌ನಿಂದ ಸುಮಾರು ಮಾರ್ಚ್ ತನಕ ಬೇಲದ ಹಣ್ಣಿನ ಋತು. ಗಣೇಶನೂ ಬೇಲ ಪ್ರಿಯನೆಂಬುದು ಪ್ರತೀತಿ. ಆದರೆ ಸೆಪ್ಟೆಂಬರ್ ತಿಂಗಳಲ್ಲಿ ಬರುವ ಈತನ ಹಬ್ಬಕ್ಕಾಗುವಾಗ ಮರದಲ್ಲದು ಎಳೆ ಕಾಯಿಯಷ್ಟೇ. 'ಹಣ್ಣು ಹೇಗೂ ಸಿಗೊಲ್ಲ, ಕಾಯಾದರೂ ಸಮರ್ಪಣೆಗೆ ಓಕೆ' ಎನ್ನುತ್ತಾ ಎಳೆಕಾಯಿಯ ನೈವೇದ್ಯ. ಈ ಸಮಯದಲ್ಲಿ ಬೇಲಕ್ಕೆ ಬಹುಬೇಡಿಕೆ. ದಿಢೀರನೇ ಮಧ್ಯವರ್ತಿಗಳ ಸೃಷ್ಟಿ. ದರವೂ ಅಧಿಕ.

'ಸಾರ್, ಮಿಡ್ಲ್‌ಮ್ಯಾನ್ ಇದ್ದಾರಲ್ಲಾ, ಗೆಲ್ಲನ್ನೇ ಕಟ್ ಮಾಡಿ ಒಯ್ತಾರೆ. ಕೆಲವೆಡೆ ಆಯುಧ ಪೂಜೆಗೂ ಬೇಕು. ಹಾಗಾಗಿ ಶೇ.60–70ರಷ್ಟು ಕಾಯಿಗಳು ಬಲಿಯುವ ಮುನ್ನವೆ ಕೊಯ್ಲು ಆಗಿರುತ್ತದೆ' ಎಂದು ವಾಸ್ತವದತ್ತ ಬೆರಳು ತೋರುತ್ತಾರೆ ಉಮಾಶಂಕರ್.

ಬೇಲದ ಹಣ್ಣಿನ ಹೊರ ಕವಚ ಗಟ್ಟಿ. ನೆಲಕ್ಕೆ ಕುಕ್ಕಿದಾಗ ಬಿರಿಯುತ್ತದೆ. ಒಳಗಡೆ ಬೀಜದಿಂದ ಕೂಡಿದ ಹೂರಣ. ಕಾಡಿನಲ್ಲಿರುವ ಮರಗಳನ್ನು ಹುಡುಕಿ, ಹಣ್ಣನ್ನು ಆಯ್ದು ಮಾರಾಟ ಮಾಡುವ ಒಂದಷ್ಟು ಮಂದಿ ಸಿಗುತ್ತಾರೆ. ಬೇಲವನ್ನು ನೆಟ್ಟು ಬೆಳೆಸುವುದು ಕಡಿಮೆ. ಉಮಾಶಂಕರ್ ನಂತಹ ಸಸ್ಯಪ್ರೇಮಿಗಳು ಕೆಲವೇ ಮಂದಿ ಸಿಗುತ್ತಾರೆ.

ಇವರು ಹಣ್ಣಾಗಿ ಉದುರಿದ ಹಣ್ಣನ್ನು ಮಾತ್ರ ಮಾರಾಟ ಮಾಡುತ್ತಾರೆ. ಒಂದು ಹಣ್ಣಿಗೆ ಮೂರರಿಂದ ಐದು ರೂಪಾಯಿ. ಇವರಿಂದ ಒಂದಷ್ಟು ಹಣ್ಣನ್ನು ಒಯ್ದು ನಗರದಲ್ಲಿ ಮತ್ತೆ ಸೆಕೆಂಡ್ ಸೇಲ್ ಮಾಡಿ ಪುಡಿಗಾಸು ಮಾಡುವವರೂ ಇದ್ದಾರಂತೆ.

ಉಮಾಶಂಕರ್ ತಮ್ಮ ಬೇಲದ ಮರದ ಬುಡದಲ್ಲಿ ತೆಂಗಿನ ಮಡಲನ್ನು ಬೆಡ್‌ನಂತೆ ಹಾಸಿದ್ದಾರೆ. ಬೀಳುವ ಹಣ್ಣು ಬಿರಿಯಬಾರದಲ್ವಾ! ಬಿರಿದರೆ ಮಾರಲಾಗದು, ತಿನ್ನಬೇಕಷ್ಟೇ. ರಾತ್ರಿ ಹೊತ್ತಲ್ಲಿ ಬೀಳುವುದು ಜಾಸ್ತಿ. ಬಿದ್ದ ಹಣ್ಣು ಇಪ್ಪತ್ತು ದಿವಸ ತಾಳಿಕೆ. 'ಮಳೆಗಾಲದಲ್ಲಿ ಚಿಗುರಿ, ಬೇಸಿಗೆಯಲ್ಲಿ ಅಂದರೆ ಯುಗಾದಿ ಸುಮಾರಿಗೆ ಎಲ್ಲಾ ಎಲೆಗಳನ್ನು ಮರ ಉದುರಿಸಿಕೊಳ್ಳುತ್ತದೆ. ಆಗ ನೋಡಬೇಕು, ಅದರಲ್ಲಿರುವ ಗೆಲ್ಲುಗಳಲ್ಲಿ ತೂಗುತ್ತಿರುವ ಕಾಯಿಗಳ ಅಂದ. ಮೇ ತನಕವೂ ಹಣ್ಣಾಗಿ ಉದುರುತ್ತಲೇ ಇರುತ್ತದೆ'– ಬೇಲದ ಸೊಬಗನ್ನು ಹಾರೋಹಳ್ಳಿಯ ಗಣಪತಿ ಭಟ್ ಹೇಳುವ ರೀತಿಯೇ ರೋಚಕ.

ಬೇಲವನ್ನು ನೆಟ್ಟು ಬೆಳೆಸಬಾರದು ಎಂಬ ನಂಬುಗೆಯಿದೆ. ಹಾಗಾಗಿ ಮನೆಯ ಪಕ್ಕ ಯಾರೂ ಬೆಳೆಸುವುದಿಲ್ಲ. 'ನೋಡ್ರಿ, ನನ್ನ ಮನೆಯ ಪಕ್ಕದ ಮರಕ್ಕೆ ಹನ್ನೆರಡು ವರುಷವಾಯಿತು. ಐದಾರು ವರುಷದಿಂದ ಒಳ್ಳೆಯ ಹಣ್ಣು ಕೊಡುತ್ತೆ. ರುಚಿರುಚಿಯಾಗಿದೆ. ಸಂತೋಷದಿಂದ ತಿನ್ತೀನಿ. ಇಷ್ಟರವರೆಗೆ ನನಗೇನೂ ತೊಂದರೆಯಾಗಿಲ್ಲ' ಎನ್ನುವಾಗ ಮನೆಯೊಡತಿ ಸರ್ವಮಂಗಳಾ ಎರಡನೇ ಸುತ್ತಿನ ಜ್ಯೂಸ್ ಸಿದ್ಧ ಮಾಡಿದ್ದರು.

'ಮರ ಬಲಿದಂತೆಲ್ಲಾ ಕಾಯಿ ಬಿಡುವ ಪ್ರಮಾಣ ಹೆಚ್ಚು. ತೋಟದಲ್ಲಿ ಮರ ಹೊಂದಿದ ಯಜಮಾನರುಗಳು ಗುತ್ತಿಗೆ ನೀಡುತ್ತಾರೆ. ಕಾಯನ್ನು ಕೊಯಿದು ಬೇಯಿಸುತ್ತಾರೆ. ಹಣ್ಣಾದಂತೆ ಭಾಸವಾಗುತ್ತದೆ. ಅದನ್ನು ಹಣ್ಣೆಂದು ಮಾರುತ್ತಾರೆ. ಎಂತಹ ಮೋಸದ ವ್ಯವಹಾರ ನೋಡಿ' ಎನ್ನುವಾಗ ಉಮಾಶಂಕರ್ ವಿಷಾದ.

ಆನೆಗಳು ಬೇಲದ ಹಣ್ಣನ್ನು ಇಡಿಯಾಗಿ ನುಂಗುತ್ತವೆ. ಲದ್ದಿಯೊಂದಿಗೆ ಹೂರಣ ಕಳೆದುಕೊಂಡು ಹಾಗೆಯೇ ಹೊರ ಬರುತ್ತದಂತೆ. ಇವಕ್ಕೆ ಬೇಲದ ಹಣ್ಣು ಇಷ್ಟ. ಹಾಗಾಗಿ ಗಣಪತಿಗೂ ಇಷ್ಟವೇನೋ!